# ವಿಶ್ವಾಸ ಪ್ರಮಾಣಗಳು

**ದೇವರ ವಾಕ್ಯಗಳು**

ನಾವು ಸತ್ಯವೇದವು ಹಳೆಒಡಂಬಡಿಕೆ ಮತ್ತು ಹೊಸಒಡಂಬಡಿಕೆ ವಿಭಾಗಗಳಾಗಿದ್ದು ಮೌಖಿಕ ಪ್ರೇರೇಪಣೆಯಿಂದ ಕೂಡಿದ್ದು, ದೋಷರಹಿತವಾದದ್ದು ಮತ್ತು ಅಧಿಕಾರವುಳ್ಳ ದೇವರ ವಾಕ್ಯವೆಂದು ಹಾಗೂ ನಂಬಿಕೆ ಮತ್ತು ಜೀವನಕ್ಕೆ ಅಂತಿಮ ನಿಯಮವೆಂದು ನಂಬುತ್ತೇವೆ.
ಆಧಾರ ವಾಕ್ಯಗಳು: 2 ತಿಮೊಥಿ 2:15–17, 2 ಪೇತ್ರ 1:20–21, ಯೋಹಾನ 17:17.

**ದೇವರು**

ನಾವು ಒಬ್ಬನೇ ನಿತ್ಯನಾದ ದೇವರು, ಸೃಷ್ಠಿಕರ್ತನು ಮತ್ತು ಪೋಷಿಸುವವನು ಹಾಗೂ ಸರ್ವಕಾಲದಲ್ಲಿಯೂ ಸಮಾನ ತ್ರೈಯೇಕ ವ್ಯಕ್ತಿಗಳಾದ ತಂದೆ, ಮಗ ಮತ್ತು ಪವಿತ್ರಾತ್ಮನಾಗಿ ಇರುವವರಾಗಿದ್ದಾರೆಂದು ನಂಬುತ್ತೇವೆ.
ಆಧಾರ ವಾಕ್ಯಗಳು: ಧರ್ಮೋ 6:4, ಮತ್ತಾ 28:19, ಯೋಹಾನ 10:30, ಎಫೆಸ 4:4–6, ಯೆಶಾ 44:6

**ಯೇಸು ಕ್ರಿಸ್ತನು**

ನಾವು ಯೇಸು ಕ್ರಿಸ್ತನು ಪರಿಪೂರ್ಣ ದೇವರು ಮತ್ತು ಪರಿಪೂರ್ಣ ಮನುಷ್ಯರು ಎಂದು ನಂಬುತ್ತೇವೆ. ಆತನು ಕನ್ಯೆಯಲ್ಲಿ ಜನಿಸಿದವನಾಗಿ ಪಾಪರಹಿತ ಜೀವನವನ್ನು ನಡೆಸಿದರು, ಅದ್ಭುತಗಳನ್ನು ನಡೆಸಿದರು, ನಮಗಾಗಿ ಪ್ರಾಯಶ್ಚಿತ್ತ ಯಜ್ಞವಾಗಿ ಶಿಲುಬೆಯಲ್ಲಿ ಪ್ರಾಣವನ್ನು ಸಮರ್ಪಿಸಿದರು, ಮರಣದಿಂದ ಮೂರನೇ ದಿನ ಮೃತ್ಯಂಜಯನಾಗಿ ಎಬ್ಬಿಸಲ್ಪಟ್ಟು ಪರಲೋಕಕ್ಕೆ ಆರೋಹಣವಾದರು ಮತ್ತು ಮಹಿಮೆಯಲ್ಲಿ ಹಿಂತಿರುಗಿ ಬರುವರೆಂದು ನಂಬುತ್ತೇವೆ.
ಆಧಾರ ವಾಕ್ಯಗಳು: ಯೆಶಾ 9:6, ಮತ್ತಾ 1:23, ಲೂಕ 1:35, ಯೋಹಾನ 1:1, ರೋಮ 1:3–4, ಇಬ್ರಿಯ 4:15, ಫಿಲಿಪ್ಪಿ 2:5–8. 1 ಕೊರಿಂಥ 15:3–4, ಅ,ಕೃ 1:11

**ಯೇಸು ಕ್ರಿಸ್ತನ ಕಾರ್ಯ**

ಯೇಸು ಕ್ರಿಸ್ತನು ನಮ್ಮ ಪಾಪಗಳಿಗಾಗಿ ಮರಣವನ್ನು ಹೊಂದಿ, ಪುನರುತ್ಥಾನವನ್ನು ಹೊಂದಿ ದೇವರ ಮುಂದೆ ವಿಮೋಚಕನಾಗಿಯೂ ನೀತಿವಂತನಾಗಿಯೂ ಕಾಣಿಸಿಕೊಂಡಿದ್ದಾರೆಂದು ನಾವು ನಂಬುತ್ತೇವೆ. ಅವರ ಮರಣ ಮತ್ತು ಪುರುತ್ಥಾನವು ನಮ್ಮ ರಕ್ಷಣೆಗೆ ಆಧಾರವಾಗಿದೆ.
ಆಧಾರ ವಾಕ್ಯಗಳು: ರೋಮ 3:24–26, ಎಫೆಸ 2:8–9, 1 ಕೊರಿಂಥ 15:20, 2 ಕೊರಿಂಥ 5:21, ಇಬ್ರಿಯ 9:1

**ಪವಿತ್ರಾತ್ಮನು**

ಪವಿತ್ರಾತ್ಮನು ಯೇಸು ಕ್ರಿಸ್ತನನ್ನು ಮಹಿಮೆ ಪಡಿಸುತ್ತಾನೆ, ಲೋಕಕ್ಕೆ ಪಾಪದ ಅರಿವನ್ನು ಹುಟ್ಟಿಸುತ್ತಾನೆ, ವಿಶ್ವಾಸಿಗಳನ್ನು ಪುನರುಜ್ಜೀವಿಸುತ್ತಾನೆ, ನಮ್ಮಲ್ಲಿ ನೆಲೆಗೊಳ್ಳುತ್ತಾನೆ, ಬಲಪಡಿಸುತ್ತಾನೆ, ಮುದ್ರೆಯನ್ನು ಹಾಕುತ್ತಾನೆ ಮತ್ತು ವಿಶ್ವಾಸಿಗಳನ್ನು ಸಕಲವಿಧವಾದ ಸತ್ಯಕ್ಕೆ ನಡೆಸುತ್ತಾನೆ ಎಂದು ನಂಬುತ್ತೇವೆ.
ಆಧಾರ ವಾಕ್ಯಗಳು: ಯೋಹಾನ 16:8, 14, ರೋಮ 8:9, ತೀತ 3:5, 1 ಕೊರಿಂಥ 12:13, ಎಫೆಸ 1:13, ಅ.ಕೃ 1:8

**ಮನುಷ್ಯನ ಸ್ಥಿತಿ ಮತ್ತು ರಕ್ಷಣೆ**
ನಾವು ಎಲ್ಲಾ ಜನರು ಮೂಲ ಸ್ವಭಾವದಲ್ಲಿ ಮತ್ತು ಆಯ್ಕೆಯಲ್ಲಿ ಪಾಪಿಗಳಾಗಿದ್ದು ದೇವರಿಂದ ಬೇರ್ಪಡಿಸಲ್ಪಟ್ಟವರಾಗಿದ್ದಾರೆ. ಯೇಸು ಕ್ರಿಸ್ತನು ಒಬ್ಬನೇ ರಕ್ಷಕನಾಗಿದ್ದಾನೆ. ಪಶ್ಚಾತ್ತಾಪ ಮತ್ತು ಪವಿತ್ರಾತ್ಮನಿಂದ ಹೊಸ ಜೀವನವನ್ನು ಹೊಂದಿ ನಂಬಿಕೆಯಿಂದ ಕೃಪೆಯಿಂದಲೇ ರಕ್ಷಣೆಯನ್ನು ಹೊಂದಿದ್ದೇವೆ ಎಂದು ನಂಬುತ್ತೇವೆ.
ಆಧಾರ ವಾಕ್ಯಗಳು: ರೋಮ 3:23, ಎಫೆಸ 2:1–5, ಎಫೆಸ 2:8–10, ಅ.ಕೃ 4:12, ತೀತ 3:4–7.

**ಸಭೆ**
ನಾವು ಸಭೆಯು ಎಲ್ಲಾ ವಿಶ್ವಾಸಿಗಳ ಐಕ್ಯತೆಯಾಗಿದ್ದು, ಆರಾಧನೆಗಾಗಿ ಕರೆಯಲ್ಪಟ್ಟವರು, ಸುವಾರ್ತಿಕರಣ, ಶಿಷ್ಯತ್ವ ಮತ್ತು ದೀಕ್ಷಾಸ್ನಾನ ಹಾಗೂ ಕರ್ತನ ಭೋಜನದಲ್ಲಿ ಸಕ್ರೀಯವಾಗಿರುವುದನ್ನು ನಂಬುತ್ತೇವೆ.
ಆಧಾರ ವಾಕ್ಯಗಳು: ಎಫೆಸ 4:4–6, ಅ.ಕೃ 2:42, ಮತ್ತಾ 20:19–20, 1 ಕೊರಿಂಥ 11:23–26

**ಅಂತ್ಯಕಾಲದ ಕಾರ್ಯಗಳು**
ನಾವು ಯೇಸು ಕ್ರಿಸ್ತನ ವೈಯಕ್ತಿಕ ಕ್ರಿಸ್ತನ ಎರಡನೆಯ ಬಹಿರಂಗ ಬರೋಣವನ್ನು ನಂಬುತ್ತೇವೆ. ಹಾಗೂ ಮರಣ ಹೊಂದಿರುವವರ ಪುನರುತ್ಥಾನ, ವಿಶ್ವಾಸಿಗಳು ನಿತ್ಯಜೀವಕ್ಕೆ ಸೇರ್ಪಡೆಯಾಗುವುದು, ಅವಿಶ್ವಾಸಿಗಳ ನ್ಯಾಯತೀರ್ಪು ಮತ್ತು ಸಮಸ್ತ ಕಾರ್ಯಗಳ ಪುನರಸ್ಥಾಪನೆಯನ್ನು ನಂಬುತ್ತೇವೆ.
ಆಧಾರ ವಾಕ್ಯಗಳು: 1 ಕೊರಿಂಥ 15:51–57, ಪ್ರಕ 20:11–15, ಮತ್ತಾ 25:31–46, ಪ್ರಕ 21:1–5